ಶ್ರೀ ಮಳ್ಳೂರು ಆನಂದರಾವ್.—ಅಧ್ಯಕ್ಷರೇ, ನಾನು ವಿಧಾನಪರಿಷತ್ತಿನಲ್ಲಿ ೬ ವರ್ಷಗಳ ಕಾಲ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಮಾನ್ಯ ಸದಸ್ಯರು ನನ್ನ ಹೆಸರನ್ನು ಮತ್ತು ರಾಂದೇವ್‌ರವರ ಹೆಸರನ್ನು ಮೂರು ಬಾರಿ ಹೇಳಿದ್ದಾರೆ. ನನ್ನ ಹೆಸರು ಹೇಳದೆ ಇದ್ದಿದ್ದರೆ ನಾನು ಮಾತನಾಡುತ್ತಾ ಇರಲಿಲ್ಲ.....

ಅಧ್ಯಕ್ಷರು.—ಸಭೆ ಮತ್ತು ಈ ವಿಚಾರವಾಗಿ ಚರ್ಚೆ ಮಾಡಬಹುದೆಂದು ಇಚ್ಛಿಸಿದರೆ ನನ್ನ ಅಭ್ಯಂತರ ಇಲ್ಲ. ಈ ಘಟ್ಟದಲ್ಲಿ ನಾನು ಏನು ಮಾಡುವುದಕ್ಕೆ ಆಗುತ್ತದೆ ? ತಾವೇ ಯೋಚನೆ ಮಾಡಿ.

ಶ್ರೀ ಮಳ್ಳೂರು ಆನಂದರಾವ್.—ನನ್ನ ಹೆಸರು ಹೇಳಿರುವುದರಿಂದ ಪರ್ಸನಲ್ ಎಕ್ಸ್‌ಪ್ಲನೇಷನ್ ಕೊಡಬೇಕೋ ಬೇಡವೋ ? ಮಾನ್ಯ ದೇವೇಗೌಡರು ಹೇಳಿರುವುದರಿಂದ ಈ ವಿಚಾರದ ಬಗ್ಗೆ ನಾನು ಮತ್ತೆ ಹೇಳುವುದಕ್ಕೆ ಹೋಗುವುದಿಲ್ಲ. ನಾವು ಅಲ್ಲಿ ಪ್ರಯೋಜನೆ ಮಾಡಿದ್ದೇವೆ ಎನ್ನುವ ಅರ್ಥ ಬರುವಂತೆ ಹೇಳಿದ್ದಾರೆ. ಇಲ್ಲಿ ದೊಡ್ಡ ದೊಡ್ಡ ಮಂತ್ರಿಗಳು ಇದ್ದಾರೆ, ಸಹೋದ್ಯೋಗಿಗಳು ಇದ್ದಾರೆ ಆರು ವರ್ಷದಲ್ಲಿ ಇಂಥ ಕೆಲಸ ಮಾಡಿದ್ದೇನೆಂದು ಹೇಳಲಿ.

ಶ್ರೀಮತಿ ಎಸ್. ಪ್ರಮೀಳ.—ಅಧ್ಯಕ್ಷರೇ, ಹೆಣ್ಣುಮಕ್ಕಳ ವಿಚಾರದಲ್ಲಿ ಮಾತನಾಡುವುದಕ್ಕೆ ಹೆಣ್ಣುಮಕ್ಕಳಿಗೆ ಅವಕಾಶ ಕೊಡದೆ ಇದ್ದರೆ ಹೇಗೆ ? ಹೆಣ್ಣುಮಕ್ಕಳ ಗತಿ ಗೋವಿಂದಾನೆ. ದಯವಿಟ್ಟು ನನಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಶ್ರೀಮತಿ ಸೆಲ್ವಿದಾಸ್‌ರವರು ನನ್ನ ಪರವಾಗಿ ಮಾತನಾಡಬೇಕೆಂದು ಕೇಳಿಕೊಂಡಿದ್ದಾರೆ.

ಅಧ್ಯಕ್ಷರು.—ಅದು ಆಗುವುದಿಲ್ಲ. ಈ ಕಡೆ ಕೊಟ್ಟರೆ ಆ ಕಡೆಯವರು ಕೇಳುತ್ತಾರೆ.

ಶ್ರೀಮತಿ ಎಸ್. ಪ್ರಮೀಳ.—ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಡದಿರುವ ಕಾರಣ ಸಭೆಯಿಂದ ಹೊರಗೆ ಹೋಗುತ್ತೇನೆ.

(ಶ್ರೀಮತಿ ಎಸ್. ಪ್ರಮೀಳ ಮತ್ತು ಶ್ರೀಮತಿ ಅನಸೂಯ ಗಜಾನನಶರ್ಮ ಇಬ್ಬರೂ ಸಭೆಯಿಂದ ನಿರ್ಗಮಿಸಿದರು)

† ಶ್ರೀ ಎಸ್. ಸುಬ್ಬಯ್ಯಶೆಟ್ಟಿ (ವಿದ್ಯಾಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ನಿನ್ನೆ ವಿಶ್ವವಿದ್ಯಾನಿಲಯದಲ್ಲಿ ನಡೆದ ಘಟನೆ ಬಗ್ಗೆ ಮಾನ್ಯ ಆರ್ಮುಗಂರವರು ಅದೇ ರೀತಿ ಮಾನ್ಯ ಶಾಮಣ್ಣನವರು ಇತರ ಗೆಳೆಯರೂ ಕೂಡ ಈ ಒಂದು ಘಟನೆಯನ್ನು ಖಂಡಿಸಿ ತಮ್ಮ ಕಳಕಳಿಯನ್ನು ಈ ಸಭೆಯಲ್ಲಿ ವ್ಯಕ್ತ ಪಡಿಸಿದ್ದಾರೆ. ಏನು ಘಟನೆ ನಿನ್ನೆ ನಡೆದಿದೆ ಇದು ಇಡೀ ನಮ್ಮ ವಿದ್ಯಾರ್ಥಿ ಏನು ಒಂದು ಸಮುದಾಯ ಇದೆ ಆ ಒಂದು ವಿದ್ಯಾರ್ಥಿ ಸಮುದಾಯಕ್ಕೆ ನಾಚಿಕೆ ತರುವಂತ ಘಟನೆ ಮಾತ್ರವಲ್ಲ, ಕರ್ನಾಟಕ ರಾಜ್ಯಕ್ಕೆ ನಾಚಿಕೆ ತರುವಂತ ಘಟನೆ ನಿನ್ನೆ ನಡೆದಿದೆ ಎಂದು ಹೇಳಿದರೆ ಅತಿಶಯೋಕ್ತಿ ಆಗಲಾರದು ಎಂದು ನನ್ನ ಮನಸ್ಸಿಗೆ ಅನಿಸುತ್ತೆ. ಇಂಥ ಒಂದು ಘಟನೆಯನ್ನು ಎಲ್ಲಾ ಸದಸ್ಯರೂ ಕೂಡ ಖಂಡನೆ ಮಾಡಿದ್ದಾರೆ. ಈ ರೀತಿ ಎಲ್ಲರೂ ಖಂಡನೆ ಮಾಡಿರುವುದರಿಂದ ಇದು ಇಡೀ ಸಭೆಯ ಒಂದು ಅಭಿಪ್ರಾಯವನ್ನು ಇದು ವ್ಯಕ್ತಪಡಿಸುತ್ತದೆ ಎಂದು ನಾನಾದರೂ ಕೂಡ ಭಾವಿಸಿಕೊಂಡಿದ್ದೇನೆ. ನಿನ್ನೆ ಅಲ್ಲಿ ಘಟನೆ ನಡೆದಾಗ ಅಲ್ಲಿ ನಮ್ಮ ಡೈರೆಕ್ಟರ್ ಆಫ್ ಕೊಲಿಜಿಯೇಟ್ ಎಜುಕೇಷನ್ ಶ್ರೀಮತಿ ಸೆಲ್ವಿದಾಸ್‌ರವರ ಮೇಲೆ ಕೆಲವು ವಿದ್ಯಾರ್ಥಿಗಳು ಹಲ್ಲೆ ನಡೆಸಿದಾಗ ಯಾರು ಪೋಲೀಸ್ ಸಿಬ್ಬಂದಿ ಇತ್ತು ಅವರು ನಿಜವಾದ ಪ್ರೊಟಕ್ಷನ್ ಕೊಡಬೇಕಾಗಿತ್ತು. ಆದರೆ ಹೆಚ್ಚಿನ ಪ್ರೊಟಕ್ಷನ್ ಸಿಗಲಿಲ್ಲ, ಅಲ್ಲಿ ಕರ್ತವ್ಯ ಲೋಪವಾಗಿದ್ದರಿಂದ ಅಲ್ಲಿ ಡ್ಯೂಟಿಯಲ್ಲಿದ್ದ ಸಬ್‌ಇನ್ಸ್‌ಪೆಕ್ಟರನ್ನು ಸಸ್ಪೆನ್‌ಷನ್‌ನಲ್ಲಿ ಈಗಾಗಲೇ ಇಡಲಾಗಿದೆ. ಅಲ್ಲದೆ ಅದಕ್ಕೆ ಕಾರಣರಾದ ಯಾರು ತಪ್ಪಿತಸ್ಥರು ಇದ್ದಾರೆ ಅವರಲ್ಲಿ ಮೂರು ಜನರನ್ನು ಅರೆಸ್ಟ್ ಮಾಡಿ ಕೇಸನ್ ರಿಜಿಸ್ಟರ್ ಆಗಿವೆ. ಈ ಕೇಸನ್‌ನಲ್ಲಿ Under the protection of Civil Rights Act ಕೂಡ ಒಂದು ಕೇಸನ್ನು ರಿಜಿಸ್ಟರ್ ಮಾಡಿದೆ. ಶ್ರೀಮಾನ್ ಮಾನ್ಯ ಸದಸ್ಯರು ಏನು ಒಂದು ಮಾತು ಹೇಳಿದರು ಯಾವುದೇ ರೀತಿ ಬೈದಿದ್ದಾರೆ ಅಂತ ಹೇಳಿದರು. That constitutes an offence under the Act and that is why a case has also been booked. This is the action taken on the dastardly episode which occured yesterday in the university campus.